**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಫ್. ಹೆಚ್ ಚಕ್ಕಪ್ಪನವರು ನಿಯಮ 72 ರ ಮೇರೆಗೆ ನೀಡಿರುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:** ರಾಜ್ಯದ ವಿವಿಧ ಸರ್ಕಾರಿ ಕಚೇರಿಗಳು, ವಿಧಾನ ಸೌಧ, ವಿಕಾಸ ಸೌಧ ಹಾಗೂ ಸಚಿವಾಲಯಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಬೆಳಿಗ್ಗೆ ಎಷ್ಟು ಗಂಟೆಗೆ ಕಡ್ಡಾಯವಾಗಿ ಕೆಲಸಕ್ಕೆ ಹಾಜರಿರಬೇಕು, ಮಧ್ಯಾಹ್ನದ ಭೋಜನಕ್ಕೆ ನಿಗದಿಪಡಿಸಿರುವ ನಿಖರ ಸಮಯವೆಷ್ಟು ಹಾಗೂ ಸಾಯಂಕಾಲ ಎಷ್ಟು ಗಂಟೆಗೆ ಕಚೇರಿಯಿಂದ ನಿರ್ಗಮಿಸಬೇಕು ಎಂಬ ಬಗ್ಗೆ ಸರ್ಕಾರವು ಹೊರಡಿಸಿರುವ ಅಧಿಕೃತ ಆದೇಶ ಸರಿಯಾಗಿ ಪಾಲನೆ ಆಗುತ್ತಿದೆಯೇ ? ರಾಜ್ಯದ ವಿವಿಧೆಡೆಯಿಂದ ಬರುವ ಸಾರ್ವಜನಿಕರು ನಿಮಿತ್ತ ವಿಧಾನ ಸೌಧ, ವಿಕಾಸ ಸೌಧ ಹಾಗೂ ಸಚಿವಾಲಯದ ಕಚೇರಿಗಳಿಗೆ ಭೇಟಿ ನೀಡಿದಾಗ ಹಾಗೂ ಶಾಸಕರ ಆಪ್ತ ಸಹಾಯಕರು ಕೂಡಾ ತಮ್ಮ ಕೆಲಸಗಳ ನಿಮಿತ್ತ ವಿಧಾನ ಸೌಧ, ವಿಕಾಸ ಸೌಧ ಹಾಗೂ ಸಚಿವಾಲಯದ ಕಚೇರಿಗಳಿಗೆ ಭೇಟಿ ನೀಡಿದಾಗ, ಅಧಿಕಾರಿಗಳು '**ಮೀಟಿಂಗ್**', '**ಅಧಿವೇಶನದ ಪ್ರಶೋತ್ತರ**' **ಅಥವಾ** '**ಬಜೆಟ್ ಕೆಲಸ**'ದ ನೆಪ ಹೇಳಿ ಉಡಾಫೆಯಿಂದ ವರ್ತಿಸುತ್ತಾ ಕಾಲಹರಣ ಮಾಡುತ್ತಿದ್ದಾರೆ. ಶಾಸಕರ ಕೆಲಸಗಳಿಗೇ ಇಷ್ಟು ವಿಳಂಬ ಮತ್ತು ನಿರ್ಲಕ್ಷ್ಯ ತೋರುತ್ತಿರುವ ಅಧಿಕಾರಿಗಳ ಈ ವರ್ತನೆಯಿಂದ ಸಾರ್ವಜನಿಕರ ಸ್ಥಿತಿ ಶೋಚನೀಯವಾಗಿದ್ದು, ಇನ್ನು ಸಾಮಾನ್ಯ ಜನರ ಕಥೆಯೇನು? ರಾಜ್ಯ ಸರ್ಕಾರ ಸಾರ್ವಜನಿಕರಿಗೆ ಸುಗಮವಾಗಿ ಸರ್ಕಾರದ ಸೌಲಭ್ಯಗಳು ದೊರೆಯಲು ಹಾಗೂ ಕೆಲಸಗಳು ವೇಗವಾಗಿ ನಡೆಯಲಿ ಎಂಬ ಉದ್ದೇಶದಿಂದ 'ಇ-ಕಚೇರಿ' (e-Office) ಜಾರಿಗೆ ತಂದಿದೆ. ಆದರೆ ಇಲ್ಲಿಯೂ ಕೂಡಾ ಕಡತಗಳನ್ನು ವಿಲೇವಾರಿ ಮಾಡಲು ವಿಳಂಬ ಮಾಡುತ್ತಿದ್ದು, ಈ ಬಗ್ಗೆ ಸರ್ಕಾರದ ನಿಲುವೇನು ? ಇ-ಕಚೇರಿಯ ವ್ಯವಸ್ಥೆಯಲ್ಲಿ ಬಂದಿರುವ ಕಡತಗಳನ್ನು ಗರಿಷ್ಠ ಎಷ್ಟು ದಿನಗಳೊಳಗೆ ವಿಲೇವಾರಿ ಮಾಡಬೇಕು ಎಂಬ ನಿಯಮಾವಳಿಗಳೇನು ಮತ್ತು ಈ ನಿಯಮ ಉಲ್ಲಂಘಿಸುವವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಅಲ್ಲದೆ, ಅಧಿಕಾರಿಗಳು ಅನಿವಾರ್ಯವಾಗಿ ಸಭೆಗಳಿಗೆ ತೆರಳಿದ್ದಲ್ಲಿ, ತಮ್ಮ ಟೇಬಲ್ ಮುಂದೆ ಯಾವ ಸಭೆ, ಎಷ್ಟು ಗಂಟೆಗೆ ಆರಂಭವಾಗಿದೆ ಮತ್ತು ಅಂದಾಜು ಎಷ್ಟು ಗಂಟೆಗೆ ಮುಕ್ತಾಯಗೊಂಡು ವಾಪಸ್ ಬರುತ್ತಾರೆ ಎಂಬ ಮಾಹಿತಿ ಫಲಕವನ್ನು (Display Board) ಕಡ್ಡಾಯವಾಗಿ ಪ್ರದರ್ಶಿಸುವಂತೆ ಆದೇಶ ಹೊರಡಿಸುವ ಕುರಿತು ನಿಯಮ 72 ರ ಮೇರೆಗೆ ನೀಡಿರುವ ಸೂಚನೆಯಡಿ ಮಾಹಿತಿಯನ್ನು ಕೋರಿರುತ್ತಾರೆ.

**ಉತ್ತರ:** ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ ಸರ್ಕಾರಿ ಕಚೇರಿಗಳ ಹಾಗೂ ಸಚಿವಾಲಯದ ನೌಕರರು ಕಛೇರಿಗೆ ನಿಗದಿತ ಸಮಯಕ್ಕೆ ಹಾಜರಾಗುವ ಕುರಿತು ಸರ್ಕಾರದಿಂದ ಆಗಿಂದಾಗ್ಗೆ ಸೂಚನೆಗಳನ್ನು ನೀಡಿ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಸುತ್ತೋಲೆ ದಿನಾಂಕ:25.07.2022 ರಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ನೌಕರರು ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗುವ ಕುರಿತಂತೆ ಸೂಚನೆಗಳನ್ನು ನೀಡಲಾಗಿದೆ. ಸರ್ಕಾರದ ಸುತ್ತೋಲೆ ದಿನಾಂಕ 26.08.2019 ರಲ್ಲಿ ಸಚಿವಾಲಯದ ನೌಕರರು ಬೆಳಿಗ್ಗೆ 10.00 ಗಂಟೆಗೆ ಹಾಜರಾಗುವುದು ಮತ್ತು ಸಂಜೆ 5.30 ರ ನಂತರ ಕಛೇರಿ ಬಿಡುವುದು ಹಾಗೂ ಕಛೇರಿ ವೇಳೆಯಲ್ಲಿ ಅವರವರ ಸ್ಥಾನದಲ್ಲಿ ಇರಬೇಕಾಗಿರುವುದು ನೌಕರರ ಕರ್ತವ್ಯವಾಗಿರುತ್ತದೆ ಎಂದು ತಿಳಿಸಲಾಗಿದೆ. ಮುಂದುವರೆದು, ಈ ಅಂಶದ ಕುರಿತು ಆಯಾ ಇಲಾಖೆಗಳ ಸಕ್ಷಮ ಪ್ರಾಧಿಕಾರಿಗಳು ತಮ್ಮ ಇಲಾಖೆಗಳ ಅಧಿಕಾರಿ ಸಿಬ್ಬಂದಿಗಳು ಕಚೇರಿ ಸಮಯಕ್ಕೆ ಹಾಜರಾಗದೇ ನಿರ್ಲಕ್ಷ್ಯ ತೋರುವ ಹಾಗೂ ಕಚೇರಿ ಸಮಯದಲ್ಲಿ ಲಭ್ಯವಿಲ್ಲದಿರುವ ಅಧಿಕಾರಿ ಸಿಬ್ಬಂದಿಗಳಿಗೆ ನೋಟೀಸ್ ನೀಡಿ, ಸೂಕ್ತ ಶಿಸ್ತು ಕ್ರಮ ಜರುಗಿಸುವಂತೆ ತಿಳಿಸಲಾಗಿದೆ.

ಸರ್ಕಾರಿ ಆದೇಶ ದಿನಾಂಕ: 11.12.2019ರ ಸುತ್ತೋಲೆಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯ ಪ್ಯಾರಾ 272(iii) ರನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಹಾಗೂ ಇತರೆ ಅಧಿಕಾರಿಗಳು ಮಧ್ಯಾಹ್ನ 3.30 ಗಂಟೆಯಿಂದ 5.30 ಗಂಟೆಯವರೆಗೆ ಸಾರ್ವಜನಿಕರು ಹಾಗೂ ಇತರರನ್ನು ಭೇಟಿ ಮಾಡುವ ಸಮಯವನ್ನಾಗಿ ನಿಗದಿಪಡಿಸಲಾಗಿದ್ದು, ಈ ಸಮಯದಲ್ಲಿ ಯಾವುದೇ ಸಭೆಗಳನ್ನು ನಡೆಸದೆ ಸಾರ್ವಜನಿಕರಿಗೆ ಭೇಟಿ ಮಾಡಲು ಅವಕಾಶ ಕಲ್ಪಿಸುವಂತೆ ಸೂಚಿಸಲಾಗಿದೆ. ಮುಂದುವರೆದು, ಮಾನ್ಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಸಂಸತ್ ಸದಸ್ಯರು ತಮ್ಮ ಮತ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸಲು ಕಛೇರಿಯ ಎಲ್ಲಾ ವೇಳೆಯಲ್ಲಿ ಮತ್ತು ಸಭೆಗಳ ಮಧ್ಯದಲ್ಲಿಯೂ ಸಹ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು /ಕಾರ್ಯದರ್ಶಿ ಹಾಗೂ ಇತರೆ ಅಧಿಕಾರಿಗಳನ್ನು ಭೇಟಿ ಮಾಡಲು ಅವಕಾಶ ಕಲ್ಪಿಸುವಂತೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ.

ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ (ಪರಿಷ್ಕೃತ), 2005ರ ಕಂಡಿಕೆ 42 ಮತ್ತು 78 ರಲ್ಲಿ, ಸ್ವೀಕೃ ಮತ್ತು ಕಡತಗಳನ್ನು ಆದ್ಯತೆಯ ಮೇರೆಗೆ ದಿನನಿತ್ಯ ಮಂಡಿಸಲು ತಿಳಿಸಲಾಗಿದೆ. ಕಛೇರಿ ಕಾರ್ಯವಿಧಾನಗಳಲ್ಲಿ, ಪ್ರತಿಯೊಬ್ಬ ವಿಷಯ ನಿರ್ವಾಹಕನು ತನಗೆ ಬಂದ ಪತ್ರದ ಮೇಲೆ ಯಾವುದೇ ವಿಳಂಬವಿಲ್ಲದೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಲಾಗಿದೆ.

ಅಧಿಕಾರಿಗಳು ಅನಿವಾರ್ಯವಾಗಿ ಸಭೆಗಳಿಗೆ ತೆರಳಿದ್ದಲ್ಲಿ, ತಮ್ಮ ಟೇಬಲ್ ಮುಂದೆ ಯಾವ ಸಭೆ, ಎಷ್ಟು ಗಂಟೆಗೆ ಆರಂಭವಾಗಿದೆ ಮತ್ತು ಅಂದಾಜು ಎಷ್ಟು ಗಂಟೆಗೆ ಮುಕ್ತಾಯಗೊಂಡು ವಾಪಸ್ ಬರುತ್ತಾರೆ ಎಂಬ ಮಾಹಿತಿ ಫಲಕವನ್ನು (Display Board) ಕಡ್ಡಾಯವಾಗಿ ಪ್ರದರ್ಶಿಸುವ ವಿಷಯದ ಕುರಿತಂತೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

**ಸಂಖ್ಯೆ:ಸಿಆಸುಇ(ಆಸು) 45 ಕತವ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ